ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

Phone - 080 26980100
Fax - 080 26422377

ಡಿಎಸ್ಇಆರ್‌ಟಿ
DSERT

ಸಂಖ್ಯೆ: E- 8146 DSERT/EVG/ ಸಂಭ್ರಮ ಶನಿವಾರ/2026-27 ದಿನಾಂಕ: 09-06-2026

## ಸುತ್ತೋಲೆ

ವಿಷಯ: ಬ್ಯಾಗ್ ರಹಿತ ದಿನ - Bagless Day–('ಸಂಭ್ರಮ ಶನಿವಾರ') ಉಪಕ್ರಮವನ್ನು 2026-27ನೇ ಸಾಲಿನಲ್ಲಿ ಶಾಲೆಗಳಲ್ಲಿ ಅನುಷ್ಠಾನಿಸುವ ಕುರಿತು

ಉಲ್ಲೇಖ:
1. ಸರ್ಕಾರದ ಆದೇಶ ಸಂ: ಇಡಿ 107 ಯೋಯೋಕ 2017, ಬೆಂಗಳೂರು, ದಿನಾಂಕ: 03-05-2019
2. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: E- 8146 DSERT/EVG/ ಸಂಭ್ರಮ ಶನಿವಾರ/2022-23 ದಿನಾಂಕ: 28-10-2022.
3. ಈ ಕಛೇರಿ ಜ್ಞಾಪನಾ ಸಂಖ್ಯೆ: E- 8146 DSERT/EVG/ ಸಂಭ್ರಮ ಶನಿವಾರ/2022-23 ದಿನಾಂಕ: 03-07-2023 ಮತ್ತು 08-11-2023
4. ಈ ಕಛೇರಿ ಜ್ಞಾಪನಾ ಸಂಖ್ಯೆ: E- 8146 DSERT/EVG/KAKC/ ಸಂಭ್ರಮ ಶನಿವಾರ/24/2024 ದಿನಾಂಕ: 19-02-2025
5. ಶೈಕ್ಷಣಿಕ ಮಾರ್ಗದರ್ಶಿ 2026-27

******

ಮೇಲ್ಕಂಡ ಉಲ್ಲೇಖಿತ ವಿಷಯಗಳಿಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ಹೊರೆಯನ್ನು ತಗ್ಗಿಸಲು ಹಾಗೂ ಸಂತಸದಾಯಕ ಕಲಿಕೆಯನ್ನುಂಟು ಮಾಡಲು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಪ್ರತಿ ತಿಂಗಳು ಒಂದು ಶನಿವಾರದಂದು ಬ್ಯಾಗ್ ರಹಿತ ದಿನವಾಗಿ ಆಚರಿಸುವಂತೆ ಉಲ್ಲೇಖ-1 ರಲ್ಲಿ ಆದೇಶಿಸಲಾಗಿದೆ.

ವಿದ್ಯಾರ್ಥಿಗಳನ್ನು ಬಹುಮುಖ ಚಟುವಟಿಕೆಗಳಲ್ಲಿ ತೊಡಗಿಸುವುದರ ಮೂಲಕ ನಾಗರಿಕ ಪ್ರಜ್ಞೆಯನ್ನು ಬೆಳೆಸಲು, ವಿವಿಧ ಥೀಮ್ ಗಳನ್ನು ಆಧರಿಸಿ ವಿದ್ಯಾರ್ಥಿಗಳಿಗಾಗಿ 10 ಸ್ವಯಂ ವಿವರಣಾತ್ಮಕ ಮಾಡ್ಯೂಲ್‌ಗಳನ್ನು ಹಾಗೂ ಶಿಕ್ಷಕರಿಗೆ ಮಾರ್ಗದರ್ಶಿ ಕೈಪಿಡಿಯನ್ನು ಸಿದ್ದಪಡಿಸಲಾಗಿದೆ. ಸದರಿ ಮಾಡ್ಯೂಲ್ ಗಳು ಅರಿವು, ಅನುಭವ ಮತ್ತು ಅವಲೋಕನ ಎಂಬ ಮೂರು ಹಂತಗಳನ್ನು ಒಳಗೊಂಡಿದ್ದು, ವಿದ್ಯಾರ್ಥಿಗಳೇ ಸ್ವತಃ ಕೈಗೊಳ್ಳಬಹುದಾದ ಚಟುವಟಿಕೆಗಳಾಗಿವೆ.

**'ಸಂಭ್ರಮ ಶನಿವಾರ' ಉಪಕ್ರಮ**ವನ್ನು ಶಾಲೆಗಳಲ್ಲಿ ಅನುಷ್ಠಾನಿಸಲು ಅನುಕೂಲವಾಗುವಂತೆ ಸಿದ್ದಪಡಿಸಿರುವ ವಿದ್ಯಾರ್ಥಿ ಚಟುವಟಿಕೆ ಪುಸ್ತಕ ಹಾಗೂ ಶಿಕ್ಷಕರ ಕೈಪಿಡಿಯನ್ನು ಉಲ್ಲೇಖ-2 ರಂತೆ, DSERT ವೆಬ್ ಸೈಟ್‌ನಲ್ಲಿ **(https://dsert.karnataka.gov.in)** ಅಪ್ಲೋಡ್ ಮಾಡಲಾಗಿದೆ. ಅವುಗಳನ್ನು ಬಳಸಿಕೊಂಡು ಉಲ್ಲೇಖ-3 ರಂತೆ ದಿನಾಂಕ: 03-07-2023 ರ ಜ್ಞಾಪನದನ್ವಯ 2022-23 ನೇ ಸಾಲಿನಿಂದ ನಿರಂತರವಾಗಿ ಪ್ರತಿ ತಿಂಗಳ ಮೂರನೇ ಶನಿವಾರ ಶಾಲೆಗಳಲ್ಲಿ ಈ ಉಪಕ್ರಮವನ್ನು ಅನುಷ್ಠಾನಗೊಳಿಸಲು ತಿಳಿಸಿದೆ.

ಮುಂದುವರೆದು, ರಾಜ್ಯದ ಉರ್ದು ಶಾಲೆಗಳಲ್ಲಿ ಶನಿವಾರ ಪೂರ್ಣ ದಿನವಾಗಿದ್ದು, ಶುಕ್ರವಾರ ಅರ್ಧದಿನ ಶಾಲೆ ನಡೆಯುವುದರಿಂದ, ಪ್ರತಿ ತಿಂಗಳ ಮೂರನೇ ಶುಕ್ರವಾರ ಬ್ಯಾಗ್ ರಹಿತ ದಿನವನ್ನಾಗಿ **(ಸಂಭ್ರಮ ಶನಿವಾರ)** ಆಚರಿಸಲು ಉಲ್ಲೇಖ-3 ರ ದಿನಾಂಕ: 08-11-2023 ರ ಜ್ಞಾಪನದನ್ವಯ ಕ್ರಮವಹಿಸಲು ತಿಳಿಸಲಾಗಿದೆ.

### 2026-27ನೇ ಸಾಲಿನಲ್ಲಿ ಶಾಲೆಗಳಲ್ಲಿ ಮಾಹೆವಾರು ಆಯೋಜಿಸಬೇಕಾದ ಚಟುವಟಿಕೆಗಳ ವಿವರ:

| ಕ್ರ. ಸಂ | ಮಾಡ್ಯೂಲ್ ಗಳ ಹೆಸರು | ತಿಂಗಳು (ಪ್ರತಿ ತಿಂಗಳ 3ನೇ ಶನಿವಾರ) |
|---|---|---|
| 1 | ವಿಶೇಷ ಚೇತನವುಳ್ಳ ವ್ಯಕ್ತಿಗಳೊಂದಿಗೆ ಸಂವಹನ | ಜೂನ್ - 2026 |
| 2 | ಮಾದಕ ವಸ್ತುಗಳ ದುರುಪಯೋಗ ತಡೆಗಟ್ಟುವಿಕೆ | ಜುಲೈ - 2026 |
| 3 | ಮಾಧ್ಯಮ ಮತ್ತು ಅಂತರ್ಜಾಲದ ಬಳಕೆ | ಆಗಸ್ಟ್ - 2026 |
| 4 | ಪೌಷ್ಟಿಕತೆ, ಸ್ವಾಸ್ಥ್ಯ ಮತ್ತು ನೈರ್ಮಲೀಕರಣ | ಸೆಪ್ಟಂಬರ್ - 2026 |
| 5 | ಸಾರ್ವಜನಿಕ ನೈರ್ಮಲ್ಯ-ಘನತ್ಯಾಜ್ಯದ ನಿರ್ವಹಣೆ | ಅಕ್ಟೋಬರ್ - 2026 |
| 6 | ಆರೋಗ್ಯ ಜೀವನಶೈಲಿ | ನವೆಂಬರ್ – 2026 |
| 7 | ಸಾರ್ವಜನಿಕ ಸೌಕರ್ಯಗಳು ಮತ್ತು ನನ್ನ ಜವಾಬ್ದಾರಿ | ಡಿಸೆಂಬರ್ - 2026 |
| 8 | ರಸ್ತೆ ಸುರಕ್ಷತೆ | ಜನವರಿ - 2027 |
| 9 | ಹಿಂಸೆ, ಅಪರಾಧ, ಅಪಘಾತಗಳ ಸಂದರ್ಭಗಳಲ್ಲಿ ರಕ್ಷಣೆ ಹಾಗೂ ಭದ್ರತೆ | ಫೆಬ್ರುವರಿ - 2027 |
| 10 | ಲಿಂಗ ಸಮಾನತೆಗೆ ಪ್ರೋತ್ಸಾಹ | ಮಾರ್ಚ್ - 2027 |

ಉಲ್ಲೇಖ-4 ರಂತೆ NCERT ವತಿಯಿಂದ ನೀಡಿರುವ ಮಾರ್ಗಸೂಚಿಯಲ್ಲಿನ ಚಟುವಟಿಕೆಗಳನ್ನು ಕನ್ನಡಕ್ಕೆ ಭಾಷಾಂತರಿಸಿ Website ನಲ್ಲಿ ಅಳವಡಿಸಿದೆ. ಸದರಿ ಚಟುವಟಿಕೆಗಳನ್ನು ಸಂಭ್ರಮ ಶನಿವಾರ ಆಚರಿಸುವ ದಿನಗಳಂದು ಅಗತ್ಯಾನುಸಾರ ಬಳಸಿಕೊಳ್ಳಲು ತಿಳಿಸಿದೆ.

**ಸಂಭ್ರಮ ಶನಿವಾರ** ದಿನದಂದು ಸದರಿ ಕಲಿಕಾ ಸಾಮಗ್ರಿಗಳನ್ನು ಉಪಯೋಗಿಸುವಂತೆ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಎಲ್ಲಾ ಶಿಕ್ಷಕರಿಗೆ ಮಾಹಿತಿ ಒದಗಿಸುವುದು. ಈ ಕುರಿತು ಜಿಲ್ಲೆ, ಬ್ಲಾಕ್, ಕ್ಲಸ್ಟರ್, ಮತ್ತು ಶಿಕ್ಷಕರ ಸಭೆಗಳಲ್ಲಿ ಕ್ಷೇತ್ರ ಮಟ್ಟದ ಎಲ್ಲಾ ಅಧಿಕಾರಿಗಳು ಅಗತ್ಯ ಮಾರ್ಗದರ್ಶನ ನೀಡುವುದು ಹಾಗೂ ಈ ದಿನದಂದು ಕಡ್ಡಾಯವಾಗಿ ಶಾಲೆಗಳಿಗೆ ಭೇಟಿ ನೀಡಿ ಅನುಪಾಲನೆ ಮಾಡುವ ಮೂಲಕ ಉಪಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಮೇಲುಸ್ತುವಾರಿ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿರುತ್ತದೆ.

ಈ ಸಂಬಂಧ ಡಯಟ್ ಹಂತದಲ್ಲಿ ಒಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸಿ, ಸಂಭ್ರಮ ಶನಿವಾರದ ಆಚರಣೆ ಕುರಿತು ಒಂದು ಪುಟದ ಚಿತ್ರಸಹಿತ ಕ್ರೂಢೀಕೃತ ವರದಿಯನ್ನು ಕಾರ್ಯಕ್ರಮ ನಡೆದ ಎರಡು ದಿನಗಳೊಳಗಾಗಿ DSERT ಕಛೇರಿ, EVG ಶಾಖೆಯ Email ID: **evg.kardsert1@gmail.com** ಗೆ ಸಲ್ಲಿಸುವುದು ಹಾಗೂ ಡಯಟ್ ವೆಬ್‌ಸೈಟ್ ನಲ್ಲಿ ಪ್ರಕಟಿಸುವುದು. ಅಲ್ಲದೇ ಎಲ್ಲಾ ಡಯಟ್‌ಗಳಲ್ಲಿ ಕಿರು ಅಧ್ಯಯನ ಕೈಗೊಂಡು ಫಲಶ್ರುತಿ ವರದಿಯನ್ನು ತಮ್ಮ ಹಂತದಲ್ಲಿ ಹಂಚಿಕೊಳ್ಳುವುದು ಹಾಗೂ Soft ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

15/01/2026

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ,

**ಇವರಿಗೆ,** ಅಗತ್ಯ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಉಪ ನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ರವರಿಗೆ.
2. ಉಪನಿರ್ದೇಶಕರು (ಆಡಳಿತ) ರವರ ಮುಖಾಂತರ ರಾಜ್ಯದ ಎಲ್ಲಾ BEO & BRC ಗಳಿಗೆ
3. ರಾಜ್ಯದ ಎಲ್ಲಾ BEO & BRC ರವರ ಮುಖಾಂತರ ಶಾಲೆಗಳಿಗೆ.
4. ಕಛೇರಿ ಪ್ರತಿ.

**ಪ್ರತಿಯನ್ನು:**

1. ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ಅಪರ ಆಯುಕ್ತರು, ಶಾ.ಶಿ.ಇ ಧಾರವಾಡ ಆಯುಕ್ತಾಲಯ ಮತ್ತು ಶಾ.ಶಿ.ಇ ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
6. ಕಛೇರಿ ಪ್ರತಿ.